ಕೆ. ಶ್ರೀನಿವಾಸರಾವ್

ಕಲೆ: ಗಣೇಶ ಆಚಾರ್ಯ

# ಮುತ್ತಿನಂಥ ಮೂರು ಮಾತುಗಳು



ಭೋಜನಗರವನ್ನು ಮಹೇಂದ್ರವರ್ಮನೆಂಬ ಅರಸು ಆಳುತ್ತಿದ್ದ. ತನ್ನ ದಕ್ಷ ಆಡಳಿತದಿಂದ ಜನಾನುರಾಗಿಯಾಗಿದ್ದ. ಒಂದು ದಿನ ತಪಸ್ವಿಯೊಬ್ಬ ಆಸ್ಥಾನಕ್ಕೆ ಬಂದು ಅರಸನನ್ನು ಸ್ತುತಿಸಿದ. ರಾಜ ಅವನನ್ನು ಸತ್ಕರಿಸಿ, 'ತಪಸ್ವಿಗಳೇ ತಮಗೆ ಏನು ಬೇಕು ಕೇಳಿ' ಎಂದು ಬಿನ್ನವಿಸಿದ. ತಪಸ್ವಿ ಹೇಳಿದ, 'ರಾಜನೆ, ನಾನು ಶೀಘ್ರದಲ್ಲಿ ಒಂದು ಮಹಾಯಾಗ ಮಾಡಬೇಕಿದೆ. ಅದಕ್ಕಾಗಿ ನನಗೆ ಮೂರು ಸಾವಿರ ವರಹಗಳು ಬೇಕಾಗಿವೆ. ನೀನು ಕೊಟ್ಟರೆ ಅದಕ್ಕೆ ಪ್ರತಿಯಾಗಿ ನಾನು ಮೂರು ಮುತ್ತಿನಂಥ ಮಾತುಗಳನ್ನು ನಿನ್ನ ಕಿವಿಯಲ್ಲಿ ಹೇಳುತ್ತೇನೆ. ಅವು ನಿನಗೆ ಅಪಾಯ ಕಾಲದಲ್ಲಿ ಉಪಕಾರಿಯಾಗಬಲ್ಲವು' ಎಂದನು. ಅದರಂತೆ ಅರಸನು ಮೂರು ಸಾವಿರ ವರಹಗಳನ್ನು ಕೊಡಲು, ತಪಸ್ವಿಗಳು ಅರಸನ ಕಿವಿಯಲ್ಲಿ ಮೂರು ಮುತ್ತಿನಂಥ ಮಾತುಗಳನ್ನು ಉಸುರಿ, ಆಶೀರ್ವದಿಸಿ ನಿರ್ಗಮಿಸಿದರು.

ಮರುದಿನ ರಾತ್ರಿ ಅರಸ ಮಾರುವೇಷ ಧರಿಸಿ ನಗರ ಸಂಚಾರ ಮಾಡುತ್ತಿರುವಾಗ, ಒಂದು ಮರದ ಕೆಳಗೆ ಒಬ್ಬ ಮುದುಕಿ ಅಳುತ್ತಾ ಕುಳಿತಿದ್ದನ್ನು ಕಂಡ. ಅವಳ ಅಳುವಿಗೆ ಕಾರಣ ವಿಚಾರಿಸಿದ. 'ಅಯ್ಯಾ, ಏನೆಂದು ಹೇಳಲಿ? ನಾಳೆ ರಾತ್ರಿ ಈ ನಗರದ ಅರಸನನ್ನು ಒಬ್ಬ ರಾಕ್ಷಸ ಕೊಲ್ಲಲೆಂದು ಬರುತ್ತಿದ್ದಾನೆ' ಎಂದು ಜೋರಾಗಿ ಅಳಲಾರಂಭಿಸಿದಳು. ಆಗ ರಾಜನಿಗೆ ಸನ್ಯಾಸಿ ಹೇಳಿದ ಮೊದಲ ಮುತ್ತಿನಂಥ ಮಾತು 'ಅರಸನು ಯಾವಾಗಲೂ ಮೈಯೆಲ್ಲಾ ಜಾಗೃತವಾಗಿರಬೇಕು' ನೆನಪಾಯಿತು. ಮರುದಿನ ಬೆಳಗ್ಗೆ ಏಳುತ್ತಲೇ ಅರಸನಿಗೆ ಎರಡನೇ ಮುತ್ತಿನಂಥ ಮಾತು ನೆನಪಾಯಿತು. 'ಅರಸನು ಶತ್ರುವನ್ನೂ ಇಷ್ಟಮಿತ್ರನಂತೆ ಆದರಿಸಿ ಉಪಚರಿಸಬೇಕು.' ರಾಜ ತಕ್ಷಣ ಅರಮನೆಯ ಮುಖ್ಯ ದ್ವಾರದಿಂದ ತನ್ನ ಮಲಗುವ ಕೋಣೆಯವರೆಗೂ ಇಕ್ಕೆಲಗಳಲ್ಲಿ ಹೂಗಳಿಂದ ಅಲಂಕೃತಗೊಳಿಸಿ, ಹಣ್ಣುಹಂಪಲು, ಪೇಯಗಳನ್ನು ಇರಿಸಿ, ಸ್ವಾಗತಕ್ಕೆ ಸುಂದರ ಸ್ತ್ರೀಯರನ್ನು ನೇಮಿಸಿದ. ರಾತ್ರಿಯಾಯಿತು. ವಿಧಿಲಿಖಿತದಂತೆ ರಾಕ್ಷಸ ರಾಜನನ್ನು ಕೊಲ್ಲಲು ಆಗಮಿಸಿದ. ಭವ್ಯ ಸ್ವಾಗತ ನೋಡಿ ತನ್ನ ಮೇಲೆ ತಾನೇ ಜಿಗುಪ್ಸೆಗೊಂಡು, ಇಂತಹ ಸಜ್ಜನನನ್ನು ಕೊಲ್ಲುವುದೇ ಎಂದು ಹೊರಟುಹೋದ.

ಆ ನಗರದ ಮಹಾಮಂತ್ರಿ ದುಷ್ಟನಾಗಿದ್ದ. ಸಮಯ ಕಾದು, ಅರಸನನ್ನು ಕೊಂದು, ತಾನೇ ರಾಜನಾಗಲು ಸಂಚು ರೂಪಿಸಿದ್ದ. ಅದರಂತೆ ಅಂದು ರಾಜನಿಗೆ ನಿತ್ಯ ಕೊಡುವ ಔಷಧಿಯಲ್ಲಿ ವಿಷ ಬೆರೆಸಿ ಕುಡಿಯಲು ಕೊಡುವಂತೆ ವೈದ್ಯನಿಗೆ ಬೆದರಿಸಿದ್ದ. ಅವನ ಸಂಚಿನಂತೆ ವೈದ್ಯ ವಿಷ ಬೆರೆಸಿದ